ದಿನಾಂಕಃ **05.03.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ5 ನೇ ಪ್ರತಿವಾದಿ ಪರ ಶ್ರೀ ಕೆ.ವಿ.ಎಸ್.ಕೆ. ವಕೀಲರಿಂದಃ

ಸರ್ವೆ.ನಂ.175 ರಲ್ಲಿರುವ 3 ಎಕರೆ ಜಮೀನು 1974 ರಲ್ಲಿ ನನ್ನ ತಂದೆಗೆ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ನನ್ನ ತಂದೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನು ಮಂಜೂರಾಗುವ ಪೂರ್ವದಿಂದಲೂ ಸದರಿ ಜಮೀನಲ್ಲಿ ಆದಾಯ ಇತ್ತು ಎಂದರೆ ಸರಿ.

2. ದಿಃ12.03.1973 ರಲ್ಲಿ ದಾವಾ 2 ನೇ ಸ್ವತ್ತನ್ನು ನನ್ನ ತಂದೆ ಅವರ ಸ್ವಂತ ದುಡಿಮೆಯಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತನ್ನು ನನ್ನ ತಾತ ಖರೀದಿ ಮಾಡಿರುತ್ತಾರೆ ಎಂಬುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ. ದಾವಾ 2 ನೇ ಸ್ವತ್ತನ್ನು ನನ್ನ ತಾತ ಖರೀದಿ ಮಾಡಿರುತ್ತಾರೆ ಎಂಬುದಕ್ಕೆ ಕ್ರಯಪತ್ರ ಇರುತ್ತದೆ . ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ಸೂಚಿಸಿದಕ್ಕೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

3. ದಾವಾ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾತ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. 1992-93 ರವರೆಗೆ ದಾವಾ ಸ್ವತ್ತುಗಳಿಗೆ ನಿರಾವರಿ ವ್ಯವಸ್ಥೆ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ ಸಾಕ್ಷಿ ಮುಂದುವರೆದು ಬೋರ್ ವೆಲ್ ಹಾಕಿಸಿದ್ದೇವು ಆದರೆ

ಯಾವಾಗ ಹಾಕಿಸಿದ್ದೇವು ಎಂದು ನೆನಪಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತುಗಳಲ್ಲಿ ಬೋರ್ ವೆಲ್ ಹಾಕಿಸಿದ್ದೇವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

4. 1991 ರಲ್ಲಿ 5 ನೇ ಪ್ರತಿವಾದಿಗೆ ಕಲ್ಪತರು ಗ್ರಾಮೀಣ ಬ್ಯಾಂಕಿನಲ್ಲಿ ಕೆಲಸ ಸಿಕ್ಕಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಕೆಲಸ ಸಿಕ್ಕಿರುತ್ತದೆ ಆದರೆ ವರ್ಷ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ 2 ನೇ ಸ್ವತ್ತಿನಲ್ಲಿ 1993 ರಲ್ಲಿ 5 ನೇ ಪ್ರತಿವಾದಿ ಬೋರ್ ವೆಲ್ ಹಾಕಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಿಂದ ಹಾಕಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ತದನಂತರ 5 ನೇ ಪ್ರತಿವಾದಿ ದಾವಾ 1 ನೇ ಸ್ವತ್ತಿನಲ್ಲಿ ಎರಡು ಬೋರ್ ವೆಲ್ ಹಾಕಿಸಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಒಟ್ಟು ಕುಟುಂಬದಿಂದ ಒಂದು ಬೋರ್ ವೆಲ್ ಅನ್ನು ಹಾಕಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ದಾವಾ 1 ನೇ ಸ್ವತ್ತಿನಲ್ಲಿ ಪುನಃ 11 ಬೋರ್ ವೆಲ್ ಅನ್ನು ಹಾಕಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

5. ದಾವಾ ಸ್ವತ್ತುಗಳಲ್ಲಿ ಒಟ್ಟು 14 ಬೋರ್ ವೆಲ್ ಹಾಕಿಸಿದ್ದು ಅದರಲ್ಲಿ 4 ರಲ್ಲಿ ಮಾತ್ರ ನೀರು ಬರುತ್ತಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು 2 ಮಾತ್ರ ನಡೆಯುತ್ತಿರುತ್ತದೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳಲ್ಲಿ ಬೋರ್ ವೆಲ್ ಗಳನ್ನು ಹಾಕಿಸಲು ನಾನು, ಪ್ರತಿವಾದಿ 1 ರಿಂದ 4, 6 ಮತ್ತು 7 ರವರು ಯಾವುದೇ ಹಣ ಪಾವತಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಕೊರಟಗೆರೆ ತಾಲ್ಲೂಕಿನ ಅರಸಪುರ ಗ್ರಾಮದಲ್ಲಿದ್ದ ಜಮೀನನ್ನು ಮಾರಾಟ ಮಾಡಿ ಬೋರ್ ವೆಲ್ ಹಾಕಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನಿನ ಸರ್ವೆ.ನಂಬರ್, ವಿಸ್ತೀರ್ಣ ಮತ್ತು ಯಾರಿಗೆ ಮಾರಾಟ ಮಾಡಿರುತ್ತೇವೆ

ಎಂದು ಹೇಳಲು ಆಗುವುದಿಲ್ಲ. ಆಗ ಸದರಿ ಸ್ವತ್ತಿನ ಖಾತೆ ನನ್ನ ತಾತ ರಾಮಣ್ಣನ ಹೆಸರಿನಲ್ಲಿ ಇತ್ತು . ಜಮೀನನ್ನು ಮಾರಾಟ ಮಾಡಿ ಬೋರ್ ವೆಲ್ ಹಾಕಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

6. 5 ನೇ ಪ್ರತಿವಾದಿ ಸಾಲ ಮಾಡಿ ದಾವಾ ಸ್ವತ್ತುಗಳನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಇಂದಿಗೂ 5 ನೇ ಪ್ರತಿವಾದಿ ಪಡೆದುಕೊಂಡಿರುವ ಸಾಲದಲ್ಲಿ 40-42 ಲಕ್ಷ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 2 ನೇ ಸ್ವತ್ತಿನಲ್ಲಿ ಸುಮಾರು 2 ಎಕರೆಯಲ್ಲಿ ಅಡಿಕೆ ತೋಟ ಮತ್ತು ಉಳಿಕೆ ಜಮೀನಿನಲ್ಲಿ ತೆಂಗಿನ ತೋಟವನ್ನು 5 ನೇ ಪ್ರತಿವಾದಿ ಮಾಡಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ 2 ನೇ ಸ್ವತ್ತಿನಲ್ಲಿ ತೋಟ ಮಾಡಿಸಲು ನಾವು ಯಾವುದೇ ಹಣದ ಸಹಾಯ ಮಾಡಿರುವುದಿಲ್ಲ.

7. ನನ್ನ ಮದುವೆಯಾಗಿ ಎಷ್ಟು ವರ್ಷಗಳು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಮ್ಮ ಮದುವೆಯಾಗಿ ಸುಮಾರು 40-45 ವರ್ಷ ಆಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಸರಿ ಎಂದು ಉತ್ತರಿಸುತ್ತಾರೆ. ನನ್ನ ಮದುವೆಯಾದ ದಿನದಿಂದ ನಾನು ಪ್ರತ್ಯೇಕವಾಗಿ ವಾಸವಾಗಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. 6 ನೇ ಪ್ರತಿವಾದಿಗೆ ಬೆನ್ನು ಮೂಳೆ ಮುರಿದಿತ್ತು ಎಂದರೆ ಸರಿ ಆಗ 5 ನೇ ಪ್ರತಿವಾದಿ 4-5 ಲಕ್ಷ ವೆಚ್ಚ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆಗೆ ಆರೋಗ್ಯ ಸರಿಯಿಲ್ಲದೆ ಇದ್ದಾಗಲೂ ಸಹ 5 ನೇ ಪ್ರತಿವಾದಿ ಅವರ ಚಿಕಿತ್ಸೆಯನ್ನು ನೋಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

8. 5 ನೇ ಪ್ರತಿವಾದಿ ನನ್ನ ತಂದೆಯ ಯೋಗ ಕ್ಷೇಮ ನೋಡಿಕೊಳ್ಳುತ್ತಿದ್ದ ಕಾರಣ ಮತ್ತು ದಾವಾ ಸ್ವತ್ತುಗಳನ್ನು ಅಭಿವೃದ್ಧಿ ಪಡಿಸಿದ ಕಾರಣ ನನ್ನ ತಂದೆ 2018 ರಲ್ಲಿ ದಾವಾ ಸ್ವತ್ತುಗಳಿಗೆ

ಸಂಬಂಧಿಸಿದಂತೆ 5 ನೇ ಪ್ರತಿವಾದಿಗೆ ಮರಣ ಶಾಸನ ಬರೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಮರಣ ಶಾಸನದ ಆಧಾರದ ಮೇಲೆ 5 ನೇ ಪ್ರತಿವಾದಿ ದಾವಾ ಸ್ವತ್ತುಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಮರಣ ಶಾಸನದ ಆಧಾರದ ಮೇರೆಗೆ ದಾವಾ ಸ್ವತ್ತುಗಳ ಖಾತೆ 5 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತುಗಳ ಖಾತೆ ನನ್ನ ತಂದೆಯ ಹೆಸರಿನಲ್ಲಿಯೇ ಇರುತ್ತದೆ. ಸದರಿ ದಾಖಲೆಗಳನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಸಲು ನಿಮಗೆ ತೊಂದಗೆ ಇರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

9. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಪಾಲು ಇಲ್ಲದಿದ್ದರು ಸಹ 5 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಮತ್ತು ದಾವಾ ಸ್ವತ್ತುಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ